# ಸೈಕಲ್ ಹೊಡೆದ ಮೇಲೆ...

ಹೇಳಿಕೇಳಿ ಅವರು ರೈತನ ಮಗ. ಚಿತ್ರದುರ್ಗದ ಬೆಟ್ಟದ ತಂಪು, ಬಿಸಿಲು ಎರಡನ್ನೂ ಕಂಡುಂಡ ಬಾಲ್ಯ. ಓದಿದ್ದು ಸಿವಿಲ್ ಎಂಜಿನಿಯರಿಂಗ್ ಡಿಪ್ಲೊಮಾ. ಓದು ಮುಗಿಯುವವರೆಗೆ ಬಣ್ಣದ ಬದುಕಿನ ಕುರಿತು ಒಳಗೊಳಗೇ ಬೆರಗಿತ್ತು. ಅದನ್ನು ಅದುಮಿಟ್ಟುಕೊಳ್ಳಲು ಕಾರಣವೂ ಇತ್ತೆನ್ನಿ. ತುತ್ತಿನ ಚೀಲ ತುಂಬಿಸಿಕೊಳ್ಳಲೆಂದು ಅವರು ಬೆಂಗಳೂರಿನಲ್ಲಿ ಕೆಲಸ ಹಿಡಿದದ್ದೂ ಮನೆಯವರ ಕಣ್ಣೊರೆಸಲಷ್ಟೆ. ಚಿತ್ರರಂಗದ ಆಕರ್ಷಣೆ ಎಷ್ಟರ ಮಟ್ಟಿಗೆ ಇತ್ತೆಂದರೆ, ಸೀದಾ ನಿರ್ದೇಶಕ ಎಸ್. ಮಹೇಂದರ್ ಗರಡಿಗೆ ಜಿಗಿದುಬಿಟ್ಟರು.

ಆಗ ತವರಿನ ಸೆಂಟಿಮೆಂಟ್ ಚಿತ್ರ ಮಾಡುವುದರಲ್ಲಿ ಮಹೇಂದರ್ ತೊಡಗಿದ್ದರು. ಅಂಥ ಕಾಲಘಟ್ಟದಲ್ಲಿ ಸಿನಿಮಾ ಪಟ್ಟುಗಳನ್ನು ಅರಿಯಲೆಂದು ಅವರ ಶಿಷ್ಯತ್ವ ಸ್ವೀಕರಿಸಿದರು. ಒಂದಲ್ಲ, ಎರಡಲ್ಲ, ಮೂರಲ್ಲ... ಒಂಬತ್ತು ಚಿತ್ರಗಳಲ್ಲಿ ಅವರ ಸಹಾಯಕರಾಗಿ ಕೆಲಸ ಮಾಡಿದರು. ನಿತ್ಯವೂ ಕಲಿಕೆ. ಚಿತ್ರಕಥೆಯ ಪಟ್ಟುಗಳು, ತಂತ್ರಜ್ಞಾನದ ಅರಿವು, ತಂತ್ರಗಳ ಸೂಕ್ಷ್ಮ ಹೀಗೆ ಅರಿವಿನ ಪರಿಧಿಯಲ್ಲಿ ಮುಳುಗಿದರು.

ಅವರು ಸ್ವತಂತ್ರ ನಿರ್ದೇಶಕರಾಗಲು ಭರ್ತಿ ಹದಿಮೂರು ವರ್ಷ ಬೇಕಾಯಿತು. ಸಿನಿಮಾ ಗೊತ್ತಿರುವವರೂ ತಮ್ಮದೊಂದು ಕನಸಿನ ಕೂಸು ಹೆರುವುದೆಷ್ಟು ಕಷ್ಟ ಎನ್ನುವುದಕ್ಕೆ ಇದೇ ಸಾಕ್ಷಿ. ಅವರಿಗೆ ಈ ಹಾದಿಯಲ್ಲಿ ನೆರವಾದವರು ಸ್ವರ ಸಂಯೋಜಕ ಹಂಸಲೇಖ. ಅವರೊಂದಿಗೆ ಕಥನದ ಸೂಕ್ಷ್ಮಗಳನ್ನು ಚರ್ಚಿಸುತ್ತ ಇವರೊಳಗೂ ಸಂಗೀತದ ಸಂವೇದನೆಯೊಂದು ರೂಪುಗೊಂಡಿತು.

ಈ ಕನಸುಗಾರನಿಗೆ ಮೊಗ್ಗಿನ ಮನಸುಗಳೆಂದರೆ ತುಂಬಾ ಇಷ್ಟ. ಅವುಗಳನ್ನು ಕೆಲವಕ್ಕೆ ಅವಕಾಶ ಕೊಟ್ಟು ಅರಳಿಸಿದರೆನ್ನುವುದು ಅಗ್ಗಳಿಕೆ. ಕ್ರೀಡಾ ವಸ್ತುಗಳೆಂದರೆ ಮೊದಲಿನಿಂದಲೂ ಪ್ರೀತಿ. ಅವರ ನಿರ್ದೇಶನದ ಚೊಚ್ಚಲ ಸಿನಿಮಾದ ಶೀರ್ಷಿಕೆ ಕ್ರಿಕೆಟ್‌ಗೆ ಸಂಬಂಧಿಸಿದ ಅಂಶವನ್ನು ಒಳಗೊಂಡಿತ್ತು. ಅನುಭವಿ ಖಳನಟನ ಮಗನನ್ನು ಅದರಲ್ಲಿ ಪರಿಚಯಿಸಿದರೆನ್ನುವುದು ಇನ್ನೊಂದು ವಿಶೇಷ.

ವೃತ್ತಿಬದುಕಿನ ಮೊದಲ ಕೆಲವು ವರ್ಷ ಕಡಿಮೆ ಬಜೆಟ್‌ನಲ್ಲೇ ಚಿತ್ರಗಳನ್ನು ತಯಾರಿಸಿ ಕೊಟ್ಟು, ಜಾಣತನ ತೋರಿದ ಅವರು, ಗೆಲುವಿನ ಸವಿಯನ್ನೂ ಉಂಡರು. ನಾಯಕನಷ್ಟೇ ನಾಯಕಿಯ ಪಾತ್ರಕ್ಕೂ ಆದ್ಯತೆ ನೀಡಿದ್ದು ಹೊಸತನವೇ ಹೌದು. ಅವರ ತಾಲೀಮಿನಲ್ಲೇ ಬೆಳೆದ ನಟಿಯೊಬ್ಬರು ಕನ್ನಡದ ಸದ್ಯದ ಬೇಡಿಕೆ ಇರುವ ಅಭಿನೇತ್ರಿಯರಲ್ಲಿ ಒಬ್ಬರೆನಿಸಿಕೊಂಡಿದ್ದಾರೆ. ದೊಡ್ಡ ನಟರೂ ಕಾಲ್‌ಷೀಟ್ ಕೊಡುವ ಮಟ್ಟಕ್ಕೆ ಅವರು ಬೆಳೆದದ್ದು ತಮ್ಮ ಸೃಜನಶೀಲತೆಯಿಂದಲೇ.

ಅವರೇ ಹೇಳಿಕೊಳ್ಳುವಂತೆ ಪಾತ್ರದ ತೂಕವನ್ನು ಡಬ್ಬಿಂಗ್ ಕಲಾವಿದರೂ ಹೆಚ್ಚಿಸುತ್ತಾರೆ. ಅದಕ್ಕೇ ಅವರು ತಮ್ಮ ನೆಚ್ಚಿನ ನಟಿಗೂ ಕಂಠದಾನ ಕಲಾವಿದೆಯಿಂದ ಡಬ್ ಮಾಡಿಸಿದರು. ಹಾಗಾಗಿಯೇ ಆ ನಟಿಗೆ ರಾಜ್ಯ ಪ್ರಶಸ್ತಿಯೊಂದು ತಪ್ಪಿತೆಂದು ಸುದ್ದಿಯಾಗಿತ್ತೆನ್ನುವುದು ಬೇರೆ ವಿಚಾರ.

**ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68